ದಿನಾಂಕ: 20.08.2022ರಂದು ಬೆಳ್ಳಿಗ್ಗೆ 10.00 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 22.08.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ ಪವನ್. ಕೆ.ಎಂ. ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ ಮಹೇಶ್.
5. ಶ್ರೀ ಶ್ರೀನಿವಾಸಮೂರ್ತಿ, ನಿವೃತ್ತಿ
6. ಶ್ರೀ ಪ್ರದೀಪ್.ಎನ್.
7. ಶ್ರೀ ಮಂಜು
8. ಶ್ರೀ ಶ್ರೀನಿವಾಸಮೂರ್ತಿ. ಸಾರ್ವಜನಿಕರು
9. ಶ್ರೀ ಅಂಬರೀಶ್.ಎಂ.ಜಿ. ಮಾರ್ಷಲ್
10. ಶ್ರೀ ವೆಂಕಟೇಶ್ ಮೆಹತ, ಕಂದಾಯ ನಿರೀಕ್ಷಕರು
11. ಶ್ರೀ ವಿಜಯ್ ಕುಮಾರ್
12. ಶ್ರೀ ಕೇಶವ ಮೂರ್ತಿ,
13. ಶ್ರೀ ಶಿವಕುಮಾರ್

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್ ಪ್ರದೇಶ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಕುಡಿಯುವ ನೀರಿನ ಕೊಳವೆಯಲ್ಲಿ ಸೀವೇಜ್ ನೀರು ಮಿಶ್ರಣಗೊಂಡು ದುರ್ವಾಸನೆ ಬಂದು ಕುಡಿಯುವ ನೀರು ಯೋಗ್ಯವಾಗಿರುವುದಿಲ್ಲವೆಂದು ಸಭೆಗೆ ಸಾರ್ವಜನಿಕರು ತಿಳಿಸಿರುವ ಮೇರೆಗೆ, ಸಭೆಯಲಿ ಹಾಜರಿದ್ದ ಶ್ರೀ ರಾವುಲ್‌ದೇವ್ ರವರು ತುರ್ತಾಗಿ ಕ್ರಮ ವಹಿಸಿ ಕೊಳವೆಯಲ್ಲಿ ಉತ್ತಮ ರೀತಿಯ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

2. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್ ಪ್ರದೇಶ ವ್ಯಾಪ್ತಿಯಲ್ಲಿ ಕೆ.ಇ.ಬಿ. ಬೆಸ್ಕಾಂ ಆವರಣದ ಗೋಡೆಯ ಪಕ್ಕ ಸುಮಾರು ವರ್ಷಗಳಿಂದ ಬೆಸ್ಕಾಂ ಕಂಬಗಳು ಇಕ್ಕೆಲಗಳಲ್ಲಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ ಎಂದು 3ನೇ ಬ್ಲಾಕ್‌ನ ಸಾರ್ವಜನಿಕರು ತಿಳಿಸಿರುವ ಮೇರೆಗೆ ಸ್ಥಳದಲ್ಲಿದ್ದ ಬೆಸ್ಕಾಂ ಅಭಿಯಂತರರು ಸಭೆಗೆ ಪೂರ್ಣ ಪ್ರಮಾಣದಲ್ಲಿ ಕಂಬಗಳನ್ನು ತೆರವುಗೊಳಿಸಲು ಕ್ರಮ ವಹಿಸುತ್ತೇವೆ ಎಂದು ಸಭೆಯಲ್ಲಿ ಹಾಜರಾಗಿದ್ದ ಬೆಸ್ಕಾಂ ಅಭಿಯಂತರರು ತುರ್ತಾಗಿ ಕಂಬಗಳನ್ನು ಸ್ಥಳಾಂತರಿಸುವಂತೆ ಸಭೆಯಲ್ಲಿ ತಿಳಿಸಲಾಯಿತು.

Scanned by CamScanner

3. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ ಪ್ರದೇಶ ವ್ಯಾಪ್ತಿಯಲ್ಲಿ ಪ್ರಸ್ತುತ ದಿನಗಳಲ್ಲಿ ಮಳೆ ಬಿದ್ದು, ರಸ್ತೆ ಹದಗೆಟ್ಟಿರುವುದನ್ನು ಸದಸ್ಯರು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ಈಗಾಗಲೇ ರಸ್ತೆ ಗುಂಡಿ ಮುಚ್ಚುವ ಕೆಲಸ ಮುಗಿದಿದ್ದು, 13, 14ನೇ ಮುಖ್ಯ ರಸ್ತೆ, ರಾಜಾಜಿನಗರ ಮತ್ತು ಮಹಾಗಣಪತಿನಗರ ಹಾಗೂ ಮಂಜುನಾಥನಗರದ 1ನೇ ಮುಖ್ಯ ರಸ್ತೆಯಲ್ಲಿ ಡಾಂಬರೀಕರಣ ಮಾಡಲು ಅಂದಾಜು ಪಟ್ಟಿ ಅನುಮೋದನೆಗೊಂಡಿರುತ್ತದೆ. ಅದರಂತೆ ಸದರಿ ಕೆಲಸವನ್ನು ಮಳೆ ನಿಂತ ತಕ್ಷಣ ನಿರ್ವಹಿಸಿ, ಮುಂದಿನ ಸಭೆಗೆ ವರದಿ ನೀಡುತ್ತೇನೆ ಎಂದು ಸಭೆಗೆ ಮನವಿ ಮಾಡಿರುತ್ತೇನೆ.

4. ಮಂಜುನಾಥನಗರ ಮತ್ತು ಶಿವನಗರ ಹಾಗೂ ಶಿವನಗರ, ಮಹಾಗಣಪತಿನಗರಗಳಲ್ಲಿ ಕೆಲವು ಭಾಗಗಳಲ್ಲಿ ಮರದ ಕೊಂಬೆಗಳು ಒಣಗಿದ್ದು, ಉನ್ನುಳಿದ ಮರದ ಕೊಂಬೆಗಳು ಬಾಗಿರುವುದರಿಂದ ಅಪಾಯ ಉಂಟಾಗಬಹುದೆಂದು ಸಾರ್ವಜನಿಕರು ಸಭೆಯಲಿ ತಿಳಿಸಿದಾಗ, ಸಭೆಯಲಿ ಹಾಜರಿದ್ದ ಅರಣ್ಯ ಇಲಾಖೆಯ ಅಧಿಕಾರಿಗಳು ಹಂತ ಹಂತವಾಗಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಕಟಾವು ಮಾಡಲಾಗುವುದೆಂದು ತಿಳಿಸಿದರು.

22/8/22
ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

1.

Scanned by CamScanner